ಅಪರ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ ಯವರ ನ್ಯಾಯಾಲಯ, ವಿರಾಜಪೇಟೆ

ಸಿಸಿಃನಂಃ503/2018

ಪಿಡಬ್ಲ್ಯು-4

ಸಿಡಬ್ಲ್ಯು-5

ಸಾಕ್ಷಿದಾರರ ಹೆಸರು : ಗಣಪತಿ.ಎಂ.

ತಂದೆಯ ಹೆಸರು : ಪೌತಿ ಎಂ.ಬಿ.ಕಾರ್ಯಪ್ಪ

ವಯಸ್ಸು : 53ವರ್ಷ

ವೃತ್ತಿ : ರೈತ

ವಾಸಸ್ಥಳ : ಬಿಳಗುಂದ

ದಿನಾಂಕಃ 24-02-2021 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷಿಯ ಮುಖ್ಯ ವಿಚಾರಣೆಃ ಶ್ರೀ ಎಪಿಪಿಯವರಿಂದಃ-

ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಾನು ಸುಮಾರು 7-8ವರ್ಷಗಳ ಹಿಂದೆ ಪೋಲೀಸ್ ಠಾಣೆಗೆ ಹೋಗಿದ್ದೆನು. ಆ ಸಂಧರ್ಭದಲ್ಲಿ ಪೋಲೀಸರು ನನ್ನ ಸಹಿಯನ್ನು ಒಂದು ದಾಖಲೆಗೆ ಪಡೆದುಕೊಂಡಿರುತ್ತಾರೆ. ಅದರಲ್ಲಿ ಬರೆದಿರುವ ಅಂಶ ನನಗೆ ಗೊತ್ತಿಲ್ಲ, ಮುದ್ದೆ ಮಾಲುಗಳನ್ನು ಗುರುತಿಸಲು ಸಾಧ್ಯವಿಲ್ಲ, ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಸರಕಾರಿ ಅಭಿಯೋಜಕರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)

ದಿನಾಂಕಃ10.8.2013ರಂದು ವಿರಾಜಪೇಟೆ ನಗರದ ಪಂಜರಪೇಟೆಯ ನಿಸರ್ಗ ಲೇಔಟ್‌ನಲ್ಲಿ ಚಾಸಾ-1ರವರ ವಾಸ ಇರುವ ಮನೆಯಲ್ಲಿ ಕಳ್ಳತನವಾಗಿರುವ ಬಗ್ಗೆ ಚಾಸಾ-1ರವರು ತೋರಿಸಿಕೊಟ್ಟ ಸ್ಥದಲ್ಲಿ ನನ್ನ ಹಾಗೂ ಚಾಸಾ-5ರವರ ಸಮಕ್ಷಮ ಪೋಲೀಸರು ಸ್ಥಳ ಪರಿಶೀಲನೆ ಮಾಡಿ ಮು.ಮಾ.1ರಿಂದ 5ನ್ನು ಸ್ವಾಧೀನಪಡಿಸಿಕೊಂಡು ಸಂಜೆ 5.30ರಿಂದ 7.00 ಗಂಟೆವರೆಗೆ ಸ್ಥಳ ಮಹಜರು ಮಾಡಿ ನನ್ನ ಸಹಿಯನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ಆ ಬಗ್ಗೆ ನಾನು ಈಗ ಓದಿ ಹೇಳಿದಂತೆ ಪೋಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆ ಭಾಗವನ್ನು ನಿಪಿ-8 ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ- ಇಲ್ಲ

ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-
ಸಿ.ಮಹಾಲಕ್ಷ್ಮಿ
ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ವಿರಾಜಪೇಟೆ